


ವಿದ್ಯೆ. ಆದರೂ ಪತಿಗೆ ಅವಿಧೇಯತೆ ಎಂದೂ ತೋರಿದವರಲ್ಲ. ಯಾವತ್ತೂ ಅವರು ಇಸ್ಪೀಟಿಗೆ ಎಂದು ಹೇಳಿ ಮನೆಯಿಂದ ಹೊರ ಬರುವವರೇ ಅಲ್ಲ. ಎಷ್ಟು ಮಾತ್ರಕ್ಕೂ ಪತಿಯನ್ನು ನೋಯಿಸಿದವರಲ್ಲವೇ ಅಲ್ಲ! ಒಂದು ದಿನ ಅಕ್ಕನ ಮನೆಯಲ್ಲಿ ಶುಕ್ರವಾರದ ಪೂಜೆಗೆಂದು ಬಂದರೆ, ಇನ್ನೊಂದು ದಿನ ಅಣ್ಣನ ಮನೆಯಲ್ಲಿ ಅರಿಶಿಣ ಕುಂಕುಮಕ್ಕೆ ಕರೆದಿರುತ್ತಿದ್ದರು. ಇನ್ನೊಮ್ಮೆ ತಮ್ಮನ ಮನೆಯಲ್ಲಿ ಸಂಡಿಗೆ ಹಾಕುವ ಕಾರ್ಯಕ್ರಮ... ಹೀಗೆ ವಾರಕೊಮ್ಮೆ, ತಿಂಗಳಿಗೆ ನಾಕು ಬಾರಿ ಏನಾದರೂ ವಿಶೇಷಗಳು ಹಬ್ಬ ಹುಣ್ಣಿಮೆಗಳು ಇದ್ದೇ ಇರುತ್ತಿದ್ದವು. ಯಾವುದೇ ಸುಳ್ಳು ತುಂಬಾ ದಿನ ಬಾಳಿಕೆ ಬರುವುದಿಲ್ಲವಲ್ಲ... ಹಾಗೇ ಇದೂ... ಇವರ ಕಳ್ಳಾಟಗಳು, ಹುನ್ನಾರಗಳು ಅವರ ಯಜಮಾನರಿಗೆ ತಿಳಿಯಿತು. ಆಮೇಲೆ ಅವರ ಮೇಲಿನ ದಿಗ್ಬಂಧನಗಳು ತುಸು ಹೆಚ್ಚಾಯ್ತು.

ಒಂದು ದಿನ ಅವರನ್ನು ಕರೆದುಕೊಂಡು ಹೋಗಲು ನನ್ನ ಕಡೆಯ ಸೋದರತ್ತೆ ಹೋದರು. ಒಳಹೋಗಿ ಕಾಫಿ ಕುಡಿದಾದ ಮೇಲೆ 'ಅಕ್ಕ... ಇವತ್ತು ಅತ್ತಿಗೆ ಮನೇಲಿ ಆಷಾಢ ಶುಕ್ರವಾರ, ಕುಂಕುಮಕ್ಕೆ ಕರೆದಿದ್ದಾರೆ. ಹೋಗೋಣ ನಡಿ ರೆಡಿ ಆಗು' ಅಂದರು. ಅಲ್ಲೇ ಇದ್ದ ಮಾವ 'ನೋಡು ಶಾಂತಮ್ಮ... ಕಪಿ ತಾನು ಕೆಡುವುದಲ್ಲದೆ ವನವೆಲ್ಲ ಕೆಡಿಸಿತಂತೆ. ನಿಮ್ಮ ಆಟವೆಲ್ಲ ನಂಗೊತ್ತಿದೆ. ಅಲ್ಲಿ ಕೂತು ಇಸ್ಪೀಟ್ ಬಡೀತೀರ ಅಷ್ಟೆ. ನೀವು ಮಾಡೋ ಪೂಜೆ ಹಬ್ಬ ಅಷ್ಟರಲ್ಲೇ ಇದೆ... ನಡಿ ನಡಿ... ಇವತ್ತವಳು ಎಲ್ಲಿಗೂ ಬರಲ್ಲ. ನಮ್ಮನೇಲು ಹಬ್ಬ ಮಾಡಬೇಕು' ಅಂದರು. ನಮ್ಮತ್ತೆಗೆ ಎಲ್ಲಿತ್ತೋ ಕೋಪ ಕೆಂಪುಕೆಂಪಾಗಿ ಬಿಟ್ಟರು. ಅಷ್ಟೂ ವರ್ಷದ ಸಿಟ್ಟನ್ನು ಹೊರತೆಗೆಯುತ್ತಾ ಏದುತ್ತಾ – 'ಏನಂನ್ಕೊಂಡಿದೀರ ನನ್ನ... ನಾನೇನು ಯಾವಾಗ್ಲೂ ನಿಮ್ಮೆದುರು ಕೂತಿರ್ತಿನಿ ಅಂತ ಬರಕೊಟ್ಟಿದೀನಾ? ಬರೀ ನಿಮ್ಮ ಮುಖ ನೋಡ್ಕೊಂಡು ನಿಮ್ಮನೆಯವ್ರ ಸೇವೆ ಮಾಡ್ಕೊಂಡು ಕೂತಿರಕ್ಕೆ ನಂಗೇನು ಗ್ರಹಚಾರನ? ನಾನಿವತ್ತು ಹೋಗೇ ಹೋಗ್ತೀನಿ. ನಮ್ಮಕ್ಕ ತಂಗೀರು ಅಣ್ಣ ತಮ್ಮಂದಿರ ಜೊತೆ ಇಸ್ಪೀಟು ಆಡ್ತೀನಿ. ಯಾರು ತಪ್ಪಿಸಕ್ಕಾಗುತ್ತೋ ನೋಡ್ತೀನಿ. ನಡಿಯೇ ಶಾಂತಿ' ಅನ್ನುತ್ತಾ ದಾಪುಗಾಲಿಟ್ಟು ಚಪ್ಪಲಿ ಮೆಟ್ಟಿಕೊಂಡು ಹೊರಟೇಬಿಟ್ಟರು. ಹೀಗೆ ಇಸ್ಪೀಟ್ ಮೋಹ, ಸ್ತ್ರೀ ಬಿಡುಗಡೆಯ ಮಾರ್ಗ ತೋರಿಸಿದ್ದು ಒಂದು ಇತಿಹಾಸವೆ!

ನಮ್ಮ ಮನೆಗಳಲ್ಲಿ ಸಮಾರಂಭಗಳಿಗೆ ವಿಶೇಷ ಕಳೆ ಬರುವುದೇ ಇಸ್ಪೀಟಿನಿಂದ. ಮದುವೆಗಳಿಗೆ ಇಸ್ಪೀಟು ಪ್ರಮುಖ ಆಕರ್ಷಣೆ. ರಾತ್ರಿ ಪೂರ್ತಿ ಇಸ್ಪೀಟಾಡಿ ಬೆಳಗ್ಗೆ ಮತ್ತೆ ತಿಂಡಿ ತಿಂದು ಮುಂದುವರೆಸುತ್ತಾರೆ. ರಾತ್ರಿಯಿಡೀ ಅವರಿಗೆ ಚಹಾ ಕಾಫಿ ಸರಬರಾಜು ಮಾಡಬೇಕಾದ್ದು ಆತಿಥೇಯರ ಮುಖ್ಯ ಕರ್ತವ್ಯವಾಗಿರುತ್ತದೆ. ಹಾಗೆ ಇಸ್ಪೀಟಾಡುವ ಗುಂಪಿನಲ್ಲಿ ಅನೇಕ ವೇಳೆ ಅಡುಗೆಯವರೂ ಸೇರಿಕೊಳ್ಳುತ್ತಾರೆ. ಮದುವೆಯ ಗಂಡೂ ಅಲ್ಲೇ ಕೂತಿರುತ್ತಾನೆ. 'ನೀನು ಬೆಳಗಾನೆ ಆಡುತ್ತಾ ಕೂತರೆ ಏನು ಗತಿ? ಬೆಳಿಗ್ಗೆ ನಿನ್ನದೇ ಮದುವೆ ಕಣೋ' ಅಂತ ಯಾರಾದರೂ ಎಚ್ಚರಿಸಬೇಕಾಗುತ್ತದೆ. ಬೆಳಿಗ್ಗೆ ಆರರವರೆಗೆ ಇಸ್ಪೀಟಾಡಿ ನೇರ ಬಚ್ಚಲು ಮನೆಗೆ ಹೋಗಿ ಸ್ನಾನ ಮಾಡಿ ಮದುವೆ ಶಾಸ್ತ್ರಗಳಿಗೆ ರೆಡಿಯಾದ ಭೂಪರಿಗೇನೂ ಕಮ್ಮಿ ಇಲ್ಲ. ಮದುವೆ, ಮುಂಜಿ, ಗೃಹಪ್ರವೇಶಗಳಿಗೆ ಕರೆಯಲು ಬಂದಾಗ 'ತಿಂಡಿಗೆ, ಊಟಕ್ಕೆ, ಇಸ್ಪೀಟಿಗೆ... ಎಲ್ಲಕ್ಕೂ ಬಂದು ಬಿಡಿ' ಅನ್ನುವುದು ವಾಡಿಕೆಯಾಗಿ ಹೋಗಿದೆ.

ಹಾಸನ ಜಿಲ್ಲೆಯಲ್ಲಿ ಬೈಲಹಳ್ಳಿ ಎನ್ನುವ ಗ್ರಾಮವೊಂದಿದೆ. ರಥೋತ್ಸವ ಭಾರೀ ಜೋರು. ಅಲ್ಲಿಯ ಪುಳಿಯೋಗರೆ ಭಾರೀ ಫೇಮಸ್ಸು. ಆದರೆ ಅದಕ್ಕಿಂತ ಫೇಮಸ್ಸು ಆ ತೇರಿನ ಸಮಯ ಆಡುವ ಇಸ್ಪೀಟು. ಬೇಕರಿಯವರೇ ಒಕ್ಕಲಾಗಿರುವ ಊರದು. ಎಲ್ಲರೂ ಬಹುತೇಕ ಶ್ರೀಮಂತರೆ. ಇಡೀ ವರ್ಷ ಕಷ್ಟಪಟ್ಟು ದುಡಿದಿರುತ್ತಾರೆ. ತಮ್ಮ ಕುಲದೈವ ಲಕ್ಷ್ಮೀಜನಾರ್ದನಸ್ವಾಮಿಯ ತೇರಿಗಾಗಿ ಎಲ್ಲೆಡೆಯಿಂದ ಬಂದು ಸೇರುತ್ತಾರೆ. ವೈಭವವೋಪೇತ ಊಟೋಪಚಾರ, ಉತ್ಸವ ನಡೆಯುತ್ತವೆ. ರಾತ್ರಿ ವೇಳೆ ಅಖಂಡ ಭಜನೆ... ಇಸ್ಪೀಟ್ ಭಜನೆ! ಇಡೀ ವರ್ಷ ಚೀಟಿ ಹಾಕಿ ಇಸ್ಪೀಟಿಗೆಂದೇ ಒಟ್ಟು ಮಾಡಿದ ದೊಡ್ಡ ಮೊತ್ತಗಳನ್ನು ತಂದು ಆಡಿ ಹೋಗುತ್ತಾರೆ. ಬಂದರೆ ದೊಡ್ಡ ಗಂಟು. ಹೋದರೂ ಅಷ್ಟೇ...